


GOVERNMENT OF TAMIL NADU

# ಎರಡನೇ ತರಗತಿ

## STANDARD TWO

ಅವಧಿ – II

TERM - II

# ಕನ್ನಡ ಕಸ್ತೂರಿ

## KANNADA READER

Department of School Education

Untouchability is inhuman and a crime

Government of Tamil Nadu

First Edition - 2026

(Published under New Syllabus in Trimester Pattern)

**Price : Rs.**

**A call can change your life (24×7 toll free helplines for children below 18 years)**

**If you are forced into Child Marriage or Child Labour, If you are Emotionally, Physically, Sexually Harassed or Abused,**

**If you feel unsafe dial CHILDLINE 1098 Night & Day**

**Caller details will be kept confidential**

**If you are feeling Threatened or being Abused or Harassed - Emotionally, Physically or Sexually, If you are feeling unsafe, If you need guidance for Examinations or Higher Education**

**14417**
**Education Information Centre**

**Dial 14417**

**Caller details will be kept confidential**

**Content Creation**

**State Council of Educational Research and Training**
**© SCERT 2026**
**Printing & Publishing**

**Tamil Nadu Textbook and Educational Services Corporation**

# Foreword

The early years of childhood are a time of wonder-when curiosity is boundless, imagination is vivid, and every experience becomes a step in the journey of learning. These textbooks for Classes 1 to 3 have been developed to honour this spirit, creating a learning experience that is joyful, meaningful, and engaging.

Developed as part of the **Tamil Nadu State Education Policy-2025**, these books mark a significant step towards strengthening foundational education in the State. The vision and direction provided by the **Hon'ble Minister for School Education** have ensured that the policy's emphasis on child-centred, competency-based, and inclusive learning is meaningfully reflected in these materials.

The leadership of the **Additional Chief Secretary,** School Education has been instrumental in ensuring the integration of 21st-century skills and knowledge, and in shaping the textbooks into engaging story-driven learning experiences.

This is further reflected in a competency-based approach to curriculum and assessment that moves beyond rote learning to foster deep conceptual understanding and meaningful application. The integration of value education to build character, along with life skills, art and motor skill development, enables the holistic development of the child.

**The members of the High-Level Curriculum Expert Committee, the Chairperson and the members of the Curriculum Development Committee,** have provided constant guidance, shaping and refining these materials through their insights and expertise, alongside the contributions of educators and practitioners acknowledged elsewhere in this book.

At this foundational stage, learning must build strong foundations while supporting the overall development of the child. These textbooks bring together a carefully designed set of features that make learning active, engaging, and meaningful:

- Opportunities for speaking and listening, building confidence in expression
- Activities that strengthen logical thinking and conceptual understanding
- Integrated spaces for reading and writing practice within lessons
- Fine and gross motor skill development through drawing, colouring, tracing, and movement-based tasks
- Simple avenues for independent learning and self-reflection

The books also integrate values and life skills, helping children develop empathy, cooperation, responsibility and confidence.

Learning is guided by a competency-based approach that moves beyond memorisation towards understanding and application. Assessment is embedded within the learning process, making it continuous, meaningful and supportive.

These textbooks are learning companions that invite children to explore, think and express. They represent a shared commitment to enabling every child to learn with joy, grow with confidence, and build a strong foundation for the future-advancing a vision of **"Education reimagined, inclusive, equitable, and future-ready".**

**DIRECTOR**
State Council of Educational
Research and Training (SCERT)
Tamil Nadu

# THE CONSTITUTION OF INDIA

## PREAMBLE

**WE, THE PEOPLE OF INDIA,** having solemnly resolved to constitute India into a **SOVEREIGN SOCIALIST SECULAR DEMOCRATIC REPUBLIC** and to secure to all its citizens:

**JUSTICE**, social, economic and political;

**LIBERTY** of thought, expression, belief, faith and worship;

**EQUALITY** of status and of opportunity;

and to promote among them all

**FRATERNITY** assuring the dignity of the individual and the unity and integrity of the Nation;

**IN OUR CONSTITUENT ASSEMBLY** this twenty-sixth day of November, 1949, do **HEREBY ADOPT, ENACT AND GIVE TO OURSELVES THIS CONSTITUTION.**

# ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ।
ವಿಂಧ್ಯ ಹಿಮಾಚಲ ಯಮುನಾ ಗಂಗಾ ॥
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ॥
ಗಾಹೇ ತವ ಜಯಗಾಥಾ ।
ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಜಯ ಹೇ ಜಯ ಹೇ ಜಯ ಹೇ ।
ಜಯ ಜಯ ಜಯ ಜಯ ಹೇ ॥

– ರವೀಂದ್ರನಾಥ ಠಾಗೂರ್

---

# ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ.
ನಿನ್ನ ಶ್ರೀನಾಮ ಪಂಜಾಬ್, ಸಿಂಧು (ಗುಜರಾತ್, ಮಹಾರಾಷ್ಟ್ರ), ದ್ರಾವಿಡ (ಕರ್ನಾಟಕ, ತಮಿಳುನಾಡು,
ಆಂಧ್ರಪ್ರದೇಶ,ತೆಲಂಗಾಣ), ಉತ್ಕಲ(ಒರಿಸ್ಸಾ), ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.
ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ. ಯಮುನಾ ಗಂಗಾ ನದಿಗಳ ಮಧುರ
ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.
ಅವು ನಿನ್ನ ಕೃಪೆಯನ್ನು ಬೇಡುತ್ತವೆ; ನಿನ್ನ ಕೀರ್ತಿಯನ್ನು ಹರಡುತ್ತವೆ.
ಭಾರತೀಯರಿಗೆ ಮಂಗಳವನ್ನು ನೀಡುವ ತಾಯೇ!
ನಿನಗೆ ಜಯಹೇ! ಜಯಹೇ! ಜಯಹೇ!



## ತಮಿಳು ತಾಯಿ ಪ್ರಾರ್ಥನೆ

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಗಮುಮೇ
ಅತ್ತಿಲಗ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದ ಪೆರುಂ ತಮಿಳಣಂಗೇ!
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

**ಮನೋನ್ಮಣೀಯಂ ಪಿ.ಸುಂದರನಾರ್**



## ತಮಿಳ್ ತಾಯಿಯ ಪ್ರಾರ್ಥನೆಯ ಸಾರ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಖ್ಖನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ. ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



## ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಮತ್ತು ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೆ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲ. ಮತೀಯ, ಭಾಷಿಕ, ಪ್ರಾದೇಶಿಕ, ರಾಜಕೀಯ ಅಥವಾ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಎಲ್ಲಾ ಭಿನ್ನಾಭಿಪ್ರಾಯಗಳು ಮತ್ತು ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುತ್ತೇನೆ. ಸಂವಿಧಾನಕ್ಕನುಸಾರವಾಗಿ ನಡೆದುಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತೇನೆ.



## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡ ಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟವನ್ನೂ ಕಂಡು ಹೆಮ್ಮೆಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ. ನನ್ನ ತಂದೆ ತಾಯಿಗಳು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ, ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಹೊಂದುವುದನ್ನು ಕಂಡು ನಾನು ಅತ್ಯಾನಂದ ಪಡುತ್ತೇನೆ.

# ಮುನ್ನುಡಿ

## ಪಠ್ಯಪುಸ್ತಕದೊಳಗೆ. . .

> ಕನ್ನಡ ಎನೆ ಕುಣಿದಾಡುವುದೆನ್ನೆದೆ
> ಕನ್ನಡ ಎನೆ ಕಿವಿ ನಿಮಿರುವುದು - **ಕುವೆಂಪು**

ತಮಿಳುನಾಡಿನ ವಿಶಿಷ್ಟ ಸಂಸ್ಕೃತಿ, ಭಾಷೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡು ರಾಜ್ಯ ಶಿಕ್ಷಣ ನೀತಿ 2025 ಅನ್ನು ರೂಪಿಸಲಾಗಿದೆ. ಇದು ಮಕ್ಕಳಿಗೆ ಮೂಲಭೂತ ಸಾಕ್ಷರತೆಯ ಅವಶ್ಯಕತೆ ಮತ್ತು ಶಿಕ್ಷಣದ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ, ತಮಿಳುನಾಡಿನ ಪ್ರತಿಯೊಂದು ಮಗುವೂ ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಸೇರಿದಂತೆ ವಯಸ್ಸಿಗೆ ಸೂಕ್ತವಾದ ಮೂಲ ಭಾಷಾ ಕೌಶಲ್ಯಗಳನ್ನು ಪಡೆದುಕೊಳ್ಳುತ್ತದೆ ಎಂದು ಒತ್ತಿ ಹೇಳುತ್ತದೆ. ಭಾಷೆ ಎಲ್ಲಾ ವಿಷಯಗಳನ್ನು ಕಲಿಯಲು ಅಡಿಪಾಯ ರೂಪಿಸುವುದರಿಂದ ಮಕಳು ತಮ್ಮ ಅನ್ವೇಷಣೆಯ ದಾರಿಗಳನ್ನು ಕಂಡುಕೊಳ್ಳಲು ಮತ್ತು ಅಭಿವೃದ್ಧಿಪಡಿಸಲು ಹಾಗೂ ಸಮಾಜದಲ್ಲಿ ಗೌರವದಿಂದ ಬದುಕಲು ಮಾರ್ಗದರ್ಶನ ನೀಡಲು ಈ ಪಠ್ಯಪುಸ್ತಕವನ್ನು ರಚಿಸಲಾಗಿದೆ.

ಕುತೂಹಲ ಮತ್ತು ಹೊಸದನ್ನು ಕಂಡು ಹಿಡಿಯುವ ಮಕ್ಕಳ ಸ್ವಭಾವವನ್ನು ಗುರುತಿಸುವ ಈ ಪಠ್ಯಪುಸ್ತಕವು ಅವರಿಗೆ ಪರಿಚಿತ ಹಾಗೂ ಹತ್ತಿರದ ವಿಷಯಗಳ ಆಧಾರದ ಮೇಲೆ ಪಾಠಗಳನ್ನು ಮತ್ತು ಭಾಷಾ ಆಟಗಳು ಇತ್ಯಾದಿಗಳನ್ನು ಪ್ರಸ್ತುತಪಡಿಸುತ್ತದೆ.




## ಪಠ್ಯಕ್ರಮ

ಪ್ರತಿಯೊಂದು ಪಾಠವೂ ಚಿಂತನೆಗೆ ಅವಕಾಶ ಮಾಡಿಕೊಡುವ ಪ್ರಶ್ನೆಗಳಿಂದ ಪ್ರಾರಂಭವಾಗುತ್ತದೆ. ಮಕ್ಕಳು ಸ್ವಂತ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ರೀತಿಯಲ್ಲಿ ಪಾಠವನ್ನು ರಚಿಸಲಾಗಿದೆ. ಇದು ಅವರ ಸ್ಮರಣಶಕ್ತಿ ಮತ್ತು ಗ್ರಹಿಕೆಯ ಕೌಶಲ್ಯವನ್ನು ಬಲಪಡಿಸುತ್ತದೆ. ಮಕ್ಕಳು ಪಡೆದುಕೊಳ್ಳಬೇಕಾದ ಮೂಲಭೂತ ಭಾಷಾ ಕೌಶಲ್ಯಗಳಾದ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದನ್ನು ಪಠ್ಯಕ್ರಮದಲ್ಲಿ ಈ ಕೆಳಗಿನಂತೆ ಪ್ರಸ್ತುತಪಡಿಸಲಾಗಿದೆ.

**ಘಟಕ 1**

1. **ದೀಪಾವಳಿ (ಪದ್ಯ)** (ಪದ್ಯವನ್ನು ಹಾಡುವರು ಮತ್ತು ಅಭ್ಯಾಸ ಚಟುವಟಿಕೆ ಮಾಡುವರು.)
   - ಮನೋರಂಜನ ಚಟುವಟಿಕೆಗಳು

2. **ಭವಿಷ್ಯಕ್ಕಾಗಿ ಉಳಿತಾಯ** (ಪಾಠ)
   - ಜೀವನದಲ್ಲಿ ಉಳಿತಾಯದ ಬಗ್ಗೆ ತಿಳಿದುಕೊಳ್ಳುವರು.

**ಘಟಕ 2**

3. **ಶ್ರಮಕ್ಕೆ ತಕ್ಕ ಫಲ**
   - ಕಷ್ಟಪಟ್ಟರೆ ತಕ್ಕ ಫಲ ಸಿಗುವುದು ಎಂಬುದನ್ನು ಅರಿತುಕೊಳ್ಳುವರು.

4. **ಒಗ್ಗಟ್ಟಿನಲ್ಲಿ ಬಲವಿದೆ**
   - ಮಕ್ಕಳು ಪ್ರಾಣಿಗಳ ಜೊತೆ ಯಾವ ರೀತಿ ಇರಬೇಕು ಎಂಬುದನ್ನು ಅರಿತುಕೊಳ್ಳುವರು.

## ಮೂಲಭೂತ ಕೌಶಲಗಳನ್ನು ಅಭಿವೃದ್ಧಿಪಡಿಸುವ ತರಬೇತಿ ಚಟುವಟಿಕೆಗಳು

**ಆಲಿಸುವುದು, ಮಾತನಾಡುವುದು**
ಆಲಿಸುವುದನ್ನು ಅರ್ಥ ಮಾಡಿಕೊಂಡು ತಮ್ಮದೇ ಶೈಲಿಯಲ್ಲಿ ಮಾತನಾಡುವುದು

**ಓದುವುದು**
ಅರ್ಥ ಮಾಡಿಕೊಂಡು ಓದುವುದು, ವೇಗವಾಗಿ ಆಸಕ್ತಿಯಿಂದ ಹುಡುಕಿ ಓದುವುದು

**ಬರೆಯುವುದು**
ಲಿಖಿತ ಅಭಿವ್ಯಕ್ತಿ, ಸೃಜನಶೀಲತೆಯನ್ನು ಪ್ರದರ್ಶಿಸುವುದು

## ಪಠ್ಯ ಪುಸ್ತಕದಲ್ಲಿ ಕಲಿತದ್ದನ್ನು ದೃಢಪಡಿಸುವ ಮೌಲ್ಯಮಾಪನ

- ಕಲಿತದ್ದನ್ನು ಮತ್ತೆ ನೆನಪಿಸಿಕೊಳ್ಳುವ ಭಾಗ – ನನ್ನ ನೆನಪಿನಲ್ಲಿ
- ಕಲಿತದ್ದನ್ನು ಪರೀಕ್ಷಿಸುವ ಭಾಗ (ಯೋಚಿಸಿ ಉತ್ತರಿಸುವುದು ಕಥೆ ಹೇಳುವುದು, ಹಾಡುವುದು) – ಕಲಿಕಾ ಪಯಣ
- ಮಕ್ಕಳು ತಾವು ಕಲಿತದ್ದನ್ನು ತಿಳಿದುಕೊಳ್ಳುವ ಭಾಗ – ನಾನು ಕಲಿತದ್ದು
- ಪ್ರತಿ ಘಟಕಕ್ಕೂ ನಿರಂತರ ಮೌಲ್ಯಮಾಪನ – ನಾನೇ ಮಾಡುತ್ತೇನೆ




ಕೊನೆಯದಾಗಿ ಈ ಪಠ್ಯಪುಸ್ತಕವು ಪ್ರತಿಯೊಂದು ಮಗುವೂ ಭವಿಷ್ಯದ ಜೀವನಕ್ಕೆ ಬೇಕಾದ ಶಾಶ್ವತವಾದ ಶೈಕ್ಷಣಿಕ ಅಭಿಪ್ರಾಯವನ್ನು ಪಡೆಯುವುದು. ಯಾವುದೇ ಮಗುವೂ ಕಲಿಕೆಯಲ್ಲಿ ಹಿಂದೆ ಉಳಿಯದಂತೆ ಸಮಾನ ಅವಕಾಶಗಳೊಂದಿಗೆ ಮೂಲಭೂತ ಸಾಕ್ಷರತೆಯನ್ನು ಸಾಧಿಸುವುದನ್ನು ನಿರೀಕ್ಷಿಸಲಾಗಿದೆ.

# ಪರಿವಿಡಿ


| ಘಟಕ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 1 | 1. ದೀಪಾವಳಿ (ಪದ್ಯ) | 1 |
| | 2. ಭವಿಷ್ಯಕ್ಕಾಗಿ ಉಳಿತಾಯ | 14 |
| 2 | 3. ಶ್ರಮಕ್ಕೆ ತಕ್ಕ ಫಲ | 27 |
| | 4. ಒಗ್ಗಟ್ಟಿನಲ್ಲಿ ಬಲವಿದೆ | 40 |




ಘಟಕ
1

# 1. ದೀಪಾವಳಿ (ಪದ್ಯ)



ಬಂತು ಬಂತು ದೀಪಾವಳಿ
ಬೆಳಕಿನ ದೀಪಗಳ ಓಕುಳಿ
ಸಂತೋಷ ಹರುಷವು ಮೊಗದಲ್ಲಿ
ಸಡಗರ ಸಂಭ್ರಮ ಮನೆಯಲ್ಲಿ
ಹೊಸ ಉಡುಪು ಧರಿಸುವೆವು
ಹೋಳಿಗೆ ಮಾಡಿ ತಿನ್ನುವೆವು
ಪಟಾಕಿ ಹೊಡೆದು ನಲಿಯುವೆವು
ಪಂಜಿನ ಬೆಳಕಲಿ ನಲಿಯುವೆವು
ಕತ್ತಲೆ ಒಳಗು ಬೆಳಕನು ಕಂಡು
ಅಂಧವ ಕಳೆದು ನಂದನ ಕಂಡು
ನಲಿಯುವೆವು ನಾವು ನಲಿಯುವೆವು

## 1. ಖಾಲಿ ಬಿಟ್ಟ ಜಾಗಗಳನ್ನು ಭರ್ತಿ ಮಾಡಿ

ಅ) ದೀಪಾವಳಿ ಒಂದು _____ ಹಬ್ಬವಾಗಿದೆ. (ಬೆಳಕಿನ / ಮಳೆಯ)

ಆ) ದೀಪಾವಳಿಯಲ್ಲಿ ನಾವು _____ ಹಚ್ಚುತ್ತೇವೆ. (ದೀಪ / ಪಂಜು)

ಇ) ದೀಪಾವಳಿಯಲ್ಲಿ ಜನರು ಸಿಹಿ _____ ತಯಾರಿಸುತ್ತಾರೆ. (ಕಜ್ಜಾಯ / ಹೋಳಿಗೆ)

ಈ) ದೀಪಾವಳಿಯಲ್ಲಿ _____ ಹಂಚಿ ತಿನ್ನುತ್ತಾರೆ. (ಸಿಹಿತಿಂಡಿಗಳನ್ನು / ಬನ್ನಿ ಪತ್ರೆಗಳನ್ನು)

## 2. ಸರಿಯಾದ ಉತ್ತರವನ್ನು ಆಯ್ಕೆ (✓) ಗುರುತು ಹಾಕಿ

ದೀಪಾವಳಿಯನ್ನು ಯಾವ ಹಬ್ಬ ಎಂದು ಕರೆಯುತ್ತಾರೆ?

ಅ) ಹೂವುಗಳ ಹಬ್ಬ

ಆ) ಬೆಳಕಿನ ಹಬ್ಬ

ಇ) ಮಳೆಯ ಹಬ್ಬ

ದೀಪಾವಳಿ ಹಬ್ಬದಲ್ಲಿ ಎಲ್ಲರೂ ಹೇಗಿರುತ್ತಾರೆ?

ಅ) ದುಃಖದಿಂದ

ಆ) ಕೋಪದಿಂದ

ಇ) ಸಂತೋಷದಿಂದ

ದೀಪಾವಳಿಯಲ್ಲಿ ಯಾವ ಬಟ್ಟೆ ಧರಿಸುತ್ತಾರೆ?

ಅ) ಹಳೆಯ ಬಟ್ಟೆ

ಆ) ಹೊಸ ಬಟ್ಟೆ

ಇ) ಹರಿದ ಬಟ್ಟೆ

## 3. ವಿರುದ್ಧ ಪದ ಬರೆಯಿರಿ

(ಬೆಳಕು ಸಂತೋಷ ಹೊಸದು ಕಹಿ ಕೆಳಗೆ)

ಅ) ಕತ್ತಲೆ × _____

ಆ) ದುಃಖ × _____

ಇ) ಹಳೆಯದು × _____

ಈ) ಸಿಹಿ × _____

ಉ) ಮೇಲೆ × _____

## 4. ಸರಿ ತಪ್ಪು ಗುರುತಿಸಿ

ಅ) ದೀಪಾವಳಿ ಹಬ್ಬದಲ್ಲಿ ಎಲ್ಲರೂ ದುಃಖದಿಂದ ಕೂಡಿರುತ್ತಾರೆ. (  )

ಆ) ದೀಪಾವಳಿಯಲ್ಲಿ ದೀಪಗಳಿಂದ ಮನೆಗಳನ್ನು ಅಲಂಕರಿಸುತ್ತಾರೆ. (  )

ಇ) ದೀಪಾವಳಿಯಂದು ಸಿಹಿ ತಿಂಡಿಗಳನ್ನು ತಿನ್ನುವುದಿಲ್ಲ. (  )

ಈ) ದೀಪಾವಳಿ ಕತ್ತಲೆಯ ಹಬ್ಬವಾಗಿದೆ. (  )

## 5. ಚಿತ್ರಕ್ಕನುಗುಣವಾಗಿ ಹೊಂದಿಸಿ




## 6. ಈ ಕೆಳಗಿನ ಚಿತ್ರಗಳಿಗೆ ಬಣ್ಣ ಹಚ್ಚಿ



## ಚಟುವಟಿಕೆ

♦ ಶಿಕ್ಷಕರು ಮಕ್ಕಳಿಗೆ ಹಾಳೆಯಲ್ಲಿ ಪಟಾಕಿಗಳ ಚಿತ್ರಗಳನ್ನು ಅಂಟಿಸಿ ತರಲು ಹೇಳಿ.

## ಅಭ್ಯಾಸ ಮಾಡೋಣ



### 1. ಪದ್ಯದಲ್ಲಿ ನಿನಗೆ ಇಷ್ಟವಾದ ಪದಗಳನ್ನು ಬರೆ

1. _____
2. _____
3. _____
4. _____
5. _____
6. _____
7. _____
8. _____
9. _____
10. _____



ಗುಂಪಿನಲ್ಲಿ ಯಾರು ಹೆಚ್ಚು ಪದಗಳನ್ನು ಬರೆದಿದ್ದಾರೆ ಎಂದು ಗುಂಪಿನವರೊಂದಿಗೆ ಹೇಳಿ.

ಹೆಚ್ಚು ಪದಗಳನ್ನು ಬರೆದಿರುವವರ ಸಂಖ್ಯೆ: _____

ಒಂದೇ ರೀತಿ ಬರೆದಿರುವ ಪದಗಳ ಸಂಖ್ಯೆ: _____

### 2. ಈ ಕೆಳಗಿನ ಪದಗಳನ್ನು ಗಟ್ಟಿಯಾಗಿ ಓದಿ

| | | | | |
|---|---|---|---|---|
| ಹಬ್ಬ | ಬಣ್ಣ | ಬೆಳಕು | ನಲಿವು | ಕತ್ತಲೆ |
| ದೀಪ | ಹೊಸ | ನಗು | ಹಾಡುವೆ | ಓಕುಳಿ |
| ಮನೆ | ಬಟ್ಟೆ | ಧರಿಸು | ಹೋಳಿಗೆ | ಸಂಭ್ರಮ |
| ಉಡುಪು | ಪಂಜು | ಸಡಗರ | ನಂದನ | ಧರಿಸು |





ಪದ್ಯದಲ್ಲಿರುವ ಪದಗಳನ್ನು ಬರೆಯಿರಿ.

## 3. ಪದಗಳನ್ನು ಕಂಡು ಹಿಡಿದು ಬರೆಯಿರಿ



| | | | | | |
|---|---|---|---|---|---|
| ಪು | ಹ | ಕ | ತ್ತ | ಲೆ | ಹ |
| ಓ | ಬ್ಬ | ಮ | ಉ | ಡು | ಪು |
| ಕು | ಬೆ | ಳ | ಕು | ಸ | ಹ |
| ಳಿ | ದೀ | ಪ | ಬ | ಣ್ಣಿ | ರು |
| ಜ | ಬ | ಹೋ | ಳಿ | ಗೆ | ಷ |
| ಷ | ಹ | ಪ | ಟಾ | ಕಿ | ಹ |





### ಉದಾಹರಣೆ

1. ಹಬ್ಬ
2. _____
3. _____
4. _____
5. _____
6. _____
7. _____
8. _____
9. _____
10. _____

## 4. ಓದಿ

ಚಿಟ್ಟೆ

ಬಣ್ಣದ ಚಿಟ್ಟೆ

ಸುಂದರವಾದ ಬಣ್ಣದ ಚಿಟ್ಟೆ

ಹೂವಿನ ತೋಟದಲ್ಲಿ ಇರುವ ಬಣ್ಣದ ಚಿಟ್ಟೆ





## 5. ಅಕ್ಷರಗಳನ್ನು ಜೋಡಿಸಿ ಪದಗಳನ್ನು ಓದೋಣ




## 6. ಪದಗಳನ್ನು ರಚಿಸಿ ಬರೆಯಿರಿ.




## 7. ಚಿತ್ರವನ್ನು ನೋಡಿ ಬರೆಯುವೆ, ಬಣ್ಣ ಹಚ್ಚುವೆ



## 8. ಚಿತ್ರ ನೋಡಿ ಕಥೆ ಹೇಳಿ



## 9. ಮಾದರಿಯಂತೆ ಪ್ರಾಸ ಪದಗಳನ್ನು ಬರೆ.



## 10. ಚಿತ್ರಗಳನ್ನು ನೋಡಿ ಹಬ್ಬದ ಹೆಸರುಗಳನ್ನು ಬರೆಯಿರಿ
(ಕ್ರಿಸ್ಮಸ್, ರಂಜಾನ್, ಹೋಳಿ, ಸಂಕ್ರಾಂತಿ)









## 11. ನಕಲು ಮಾಡಿ

ಅ) ಕೈ ಕೆಸರಾದರೆ ಬಾಯಿ ಮೊಸರು

ಆ) ಒಳ್ಳೆಯತನಕ್ಕೆ ಒಳ್ಳೆಯ ಫಲ

ಇ) ಅವಸರವೇ ಅಪಾಯಕ್ಕೆ ಕಾರಣ

ಈ) ಒಗ್ಗಟ್ಟಿನಲ್ಲಿ ಬಲವಿದೆ

## 12. ನೀತಿ ಕಥೆ ಕೇಳಿ ಆನಂದಿಸಿ

### ಪ್ರಾಮಾಣಿಕ ಮೊಲ



ಒಂದು ಕಾಡಿನಲ್ಲಿ ಒಂದು ಚಿಕ್ಕ ಮೊಲ ವಾಸಿಸುತ್ತಿತ್ತು. ಒಂದು ದಿನ ಅದು ಆಟವಾಡುತ್ತಾ ಹೋಗುವಾಗ ಒಂದು ಚಿನ್ನದ ನಾಣ್ಯವನ್ನು ಕಂಡಿತು. ಮೊಲ ಈ ಚಿನ್ನದ ನಾಣ್ಯ ನನ್ನದಲ್ಲ, ಇದನ್ನು ನಿಜವಾದ ಮಾಲೀಕನಿಗೆ ಕೊಡಬೇಕು ಎಂದು ಯೋಚಿಸಿತು. ಸ್ವಲ್ಪ ಹೊತ್ತಿನ ನಂತರ ಒಂದು ಅಳಿಲು ಅಲ್ಲಿಗೆ ಬಂದು ನನ್ನ ಚಿನ್ನದ ನಾಣ್ಯ ಎಲ್ಲೋ ಕಳೆದು ಹೋಗಿದೆ ಎಂದು ದುಃಖದಿಂದ ಮೊಲಕ್ಕೆ ಹೇಳಿತು.

ಮೊಲ ತಕ್ಷಣ ಇದು ನಿನ್ನ ನಾಣ್ಯವೇ ನೋಡು ಎಂದಿತು. ಅಳಿಲು ಅದನ್ನು ನೋಡಿ ತುಂಬಾ ಸಂತೋಷ ಪಟ್ಟಿತು ಮತ್ತು ಮೊಲದ ಪ್ರಾಮಾಣಿಕತೆಯನ್ನು ಹೊಗಳಿತು. ಆ ದಿನದಿಂದ ಕಾಡಿನ ಎಲ್ಲಾ ಪ್ರಾಣಿಗಳು ಮೊಲವನ್ನು ಗೌರವದಿಂದ ನೋಡಲು ಆರಂಭಿಸಿದವು.

(ನೀತಿ : ಯಾವಾಗಲೂ ಸತ್ಯವನ್ನು ಹೇಳಬೇಕು ಮತ್ತು ಪ್ರಾಮಾಣಿಕವಾಗಿರಬೇಕು)

**ಓದಿರಿ:**

| | | |
|---|---|---|
| ಕಾಡು | ಚಿನ್ನ | ಅಳಿಲು |
| ಮೊಲ | ನಾಣ್ಯ | ದುಃಖ |
| ದಿನ | ನಿಜ | ಪ್ರಾಣಿ |
| ಆಟ | ಮಾಲೀಕ | ಗೌರವ |

## 13. ಈ ಕೆಳಗಿನ ವಾಕ್ಯಗಳನ್ನು ಓದಿ ಅಭ್ಯಾಸ ಮಾಡಿ












## 14. ಹೇಳಿ ಅಭ್ಯಾಸ ಮಾಡಿ




ರಾಣಿ ಒಳ್ಳೆಯ ಹುಡುಗಿ

ಅವಳು ಎಲ್ಲರಿಗೂ ಸಹಾಯ ಮಾಡುತ್ತಾಳೆ

ಹಿರಿಯರನ್ನು ಗೌರವಿಸಬೇಕು

ಅವರನ್ನು ಗೌರವಿಸುವುದು ನಮ್ಮ ಕರ್ತವ್ಯ

ಮತ್ತೆ ಮತ್ತೆ ಉಚ್ಚರಿಸಿ ಅಭ್ಯಾಸ ಮಾಡಿ.

## ಕಲಿಕಾ ಪಯಣ

### ಸೃಜನಶೀಲ ಸಮಯ



♦ ದೀಪಾವಳಿ ಹಬ್ಬ ಮನೆಯಲ್ಲಿ ಯಾವ ರೀತಿ ಆಚರಿಸುತ್ತಾರೆ ಎಂಬುದರ ಬಗ್ಗೆ ಹೇಳಿ.

### ನಾನು ಕಲಿತದ್ದು



1. ಇಷ್ಟವಾದ ರಾಗದಲ್ಲಿ ಹಾಡನ್ನು ಹಾಡಲು ಸಾಧ್ಯ. ☐ ☆☆☆
2. ಚಿತ್ರ ನೋಡಿ ಮಾತನಾಡಲು ಸಾಧ್ಯ. ☐ ☆☆☆
3. ಅರ್ಥ ಮಾಡಿಕೊಂಡು ಪದಗಳನ್ನು ಓದಲು ಸಾಧ್ಯ. ☐ ☆☆☆

ಕಲಿತ ಕೌಶಲ್ಯಕ್ಕೆ ✓ ಗುರುತು ಹಾಕಿ. ಪಡೆದ ಸಾಮರ್ಥ್ಯಗಳಿಗೆ ತಕ್ಕಂತೆ ಬಣ್ಣ ಹಚ್ಚಿ.





## ಮನರಂಜನಾ ಪುಟ

ಚಿತ್ರವನ್ನು ಗಮನಿಸಿ

ಅ) ಚಿತ್ರದಲ್ಲಿ ಯಾವ ಯಾವ ಪ್ರಾಣಿಗಳಿವೆ? _____



ಆ) ಎಷ್ಟು ಪ್ರಾಣಿಗಳಿವೆ? _____

ಇ) ಯಾವ ಪ್ರಾಣಿ ದೊಡ್ಡದು? _____

ಈ) ಎಷ್ಟು ಮರಗಳಿವೆ? _____



## ನಾನೇ ಓದುವೆ : ಬಣ್ಣ ಹಚ್ಚುವೆ



| | |
|---|---|
| ಕು | ದು |
| ಖು | ಧು |
| ಗು | ನು |
| ಘು | ಪು |
| ಜು | ಫು |
| ಚು | ಬು |
| ಛು | ಭು |
| ಜು | ಮು |
| ಝು | ಯು |
| ಞು | ರು |
| ಟು | ಲು |
| ಠು | ವು |
| ಡು | ಶು |
| ಢು | ಷು |
| ಣು | ಸು |
| ತು | ಹು |
| ಥು | ಳು |

ಳು ಯು ಮು ಭು ಲು ಖು ಷು ಹು
ಬು ಚು ಡು ಛು ರು ಟು ಣು
ಪು ಧು ಜು ಕು ತು ಶು ಗು
ಢು ಥು ಸು
ಪು ನು ಘು ದು ಥು ವು ಝು



### ಕುದುರೆ ಗಾಡಿ

ಕು
ಕು ದು ⟶ ಕುದು
ಕುದು ರೆ ⟶ ಕುದುರೆ
ಕುದುರೆ ಗಾ ⟶ ಕುದುರೆಗಾ
ಕುದುರೆಗಾ ಡಿ ⟶ ಕುದುರೆಗಾಡಿ



### ಜಿಗಿಯುವನು

ಜಿ
ಜಿ ಗಿ ⟶ ಜಿಗಿ
ಜಿಗಿ ಯು ⟶ ಜಿಗಿಯು
ಜಿಗಿಯು ವ ⟶ ಜಿಗಿಯುವ
ಜಿಗಿಯುವ ನು ⟶ ಜಿಗಿಯುವನು



| | | | |
|---|---|---|---|
| ಕುರಿ | ಸುರಿ | ಬುಗ್ಗೆ | ಹುಳು |
| ರುಬ್ಬು | ತುರುಬು | ಹುಡುಗಿ | ಹುಲಿ |
| ಗುರಿ | ಪುಸ್ತಕ | ಮೊಲ | ಗುರು |
| ಚುರುಕು | ನುಗ್ಗೆ | ಹುಬ್ಬು | ಬಾಳು |



ಇರುವೆ
ಜಾಣ ಇರುವೆ
ಸಕ್ಕರೆ ತಿನ್ನುವ ಜಾಣ ಇರುವೆ



ಬೆಕ್ಕು
ಕಳ್ಳ ಬೆಕ್ಕು
ಕದ್ದು ಹಾಲು ಕುಡಿವಬೆಕ್ಕು









## ನಾನೇ ಓದುವೆ : ಬಣ್ಣ ಹಚ್ಚುವೆ



| | |
|---|---|
| ಕೂ | ದೂ |
| ಖೂ | ಧೂ |
| ಗೂ | ನೂ |
| ಘೂ | ಪೂ |
| ಜೂ | ಫೂ |
| ಚೂ | ಬೂ |
| ಛೂ | ಭೂ |
| ಜೂ | ಮೂ |
| ಝೂ | ಯೂ |
| ಞೂ | ರೂ |
| ಟೂ | ಲೂ |
| ಠೂ | ವೂ |
| ಡೂ | ಶೂ |
| ಢೂ | ಷೂ |
| ಣೂ | ಸೂ |
| ತೂ | ಹೂ |
| ಥೂ | ಳೂ |

ಳೂ ಷೂ ಗೂ ಯೂ ಮೂ ಸೂ
ಪೂ ಡೂ ಘೂ ಧೂ ಟೂ ದೂ ಖೂ ಥೂ ಣೂ
ಬೂ ಕೂ ಭೂ ವೂ
ಪೂ ಚೂ ಠೂ ನೂ ಝೂ ತೂ ಢೂ
ಹೂ ಲೂ ಜೂ ರೂ ಛೂ ಶೂ



### ಸೂರ್ಯಕಾಂತಿ

ಸೂ
ಸೂ ರ್ಯ ⟶ ಸೂರ್ಯ
ಸೂರ್ಯ ಕಾಂ ⟶ ಸೂರ್ಯಕಾಂ
ಸೂರ್ಯಕಾಂ ತಿ ⟶ ಸೂರ್ಯಕಾಂತಿ



### ಗಡಿಯಾರ

ಗ
ಗ ಡಿ ⟶ ಗಡಿ
ಗಡಿ ಯಾ ⟶ ಗಡಿಯಾ
ಗಡಿಯಾ ರ ⟶ ಗಡಿಯಾರ



| | | | |
|---|---|---|---|
| ಕೂಗು | ಚೂರು | ತೂರು | ಗೂಳಿ |
| ಪೂರ್ವ | ಮೂಗು | ರೂಪಾಯಿ | ಭೂಮಿ |
| ಗೂಡು | ಸೂಜಿ | ದೂರು | ಮೂಗುತಿ |
| ಸೂತ್ರ | ಗೂಬೆ | ನೂಲು | ತೂಗು |



ಗೂಡು
ಗಿಳಿಯ ಗೂಡು
ಹಸಿರು ಗಿಳಿಯ ಗೂಡು



ಸೂರ್ಯ
ಉದಯಿಸುವ ಸೂರ್ಯ
ಬೆಳಗಿನ ಜಾವದಲ್ಲಿ ಉದಯಿಸುವ ಸೂರ್ಯ



# 2. ಭವಿಷ್ಯಕ್ಕಾಗಿ ಉಳಿತಾಯ




ಹತ್ತು ರೂಪಾಯಿಯ ನಾಣ್ಯವೊಂದು ನೆಲದ ಮೇಲೆ ಉರುಳುತ್ತಿರುವುದನ್ನು ನೋಡಿದ ಬಾಲಾಜಿಯು ಹಿಡಿಯಲು ಅದರ ಹಿಂದೆ ಓಡಿದ. ಹಿಡಿದ ನಂತರ ಅದನ್ನು ಹಿತ್ತಲಿನಲ್ಲಿ ನೆಟ್ಟ. ಅದು ಸ್ವಲ್ಪ ದಿನಗಳ ನಂತರ ಚಿಗುರೊಡೆದು ದೊಡ್ಡ ಗಿಡವಾಗಿ ಬೆಳೆದು ಹತ್ತು ರೂಪಾಯಿ ನಾಣ್ಯಗಳನ್ನು ಫಲವಾಗಿ ನೀಡತೊಡಗಿತು.



ಅದನ್ನು ನೋಡಿದ ಬಾಲಾಜಿ ತುಂಬಾ ಸಂತೋಷ ಪಟ್ಟ. ಗಿಡದಲ್ಲಿನ ಎಲ್ಲಾ ನಾಣ್ಯಗಳನ್ನು ಕಿತ್ತು ತನಗೆ ಇಷ್ಟವಾದ ಆಟದ ವಸ್ತುಗಳನ್ನು ಖರೀದಿಸ ಬಯಸಿದ.



ನಂತರ ಒಂದು ಅಂಗಡಿಗೆ ಓಡಿ ಹೋಗಿ ಒಂದು ಕರಡಿ ಗೊಂಬೆ, ಕ್ರಿಕೆಟ್ ಚೆಂಡು, ಬ್ಯಾಟ್, ಮಾತನಾಡುವ ಗೊಂಬೆ, ಹಾರುವ ಯಾಂತ್ರಿಕ ಪಕ್ಷಿಯನ್ನು ಖರೀದಿಸಿದ.



ಬಾಲಾಜಿಯ ಬಳಿ ಇದ್ದ ಹಣವೆಲ್ಲ ಖರ್ಚಾಯಿತು. ಮುಂದಿನ ತಿಂಗಳು ಬರಲಿರುವ ತನ್ನ ಹುಟ್ಟು ಹಬ್ಬಕ್ಕೆ ಹೊಸ ಬಟ್ಟೆಗಳನ್ನು ಖರೀದಿಸಲು ಬಯಸಿದ. ಆದರೆ ಗಿಡದಲ್ಲಿ ಹತ್ತು ರೂಗಳ ನಾಣ್ಯಗಳು ಖಾಲಿಯಾಗಿತ್ತು. ಹಾಗಾಗಿ ಅವನು ಮತ್ತೆ ಹಣ ಬೆಳೆಯಬೇಕೆಂದು ಆ ಗಿಡಕ್ಕೆ ನೀರು, ಗೊಬ್ಬರವನ್ನು ಹಾಕಿದಾಗ ಅದರಲ್ಲಿ ಹಣ ಬೆಳೆಯಲಿಲ್ಲ. ನನ್ನ ಹುಟ್ಟು ಹಬ್ಬಕ್ಕೆ ಹೊಸ ಬಟ್ಟೆ ಕೊಳ್ಳಲು ನನಗೆ ಹಣ ಕೊಡು ಎಂದು ಗಿಡವನ್ನು ಜೋರಾಗಿ ಅಲುಗಾಡಿಸಿ ಹೇಳುತ್ತಾ ಗಿಡಕ್ಕೆ ಕೋಪದಿಂದ ಹೊಡೆದ. ಪಕ್ಕದಲ್ಲಿ ಮಲಗಿದ್ದ ಅವನ ಸಹೋದರಿ 'ಅಮ್ಮ' ಎಂದು ಕಿರುಚುತ್ತಾ ಎದ್ದು ಕುಳಿತಳು.



ಬಾಲಾಜಿ ನಿದ್ರೆಯಿಂದ ಎಚ್ಚರಗೊಂಡು ತನ್ನಷ್ಟಕ್ಕೆ ತಾನೇ ನಕ್ಕನು. ಇಲ್ಲಿಯವರೆಗೆ ತಾನು ಕಂಡದ್ದು ಕನಸು ಎಂದು ಅರಿತ. ಆದ್ದರಿಂದ ಎಲ್ಲಾ ಹಣವನ್ನು ಸುಮ್ಮನೆ ಒಮ್ಮೆಲೆ ಖರ್ಚು ಮಾಡದೆ ಭವಿಷ್ಯಕ್ಕಾಗಿ ಉಳಿತಾಯ ಮಾಡಬೇಕೆಂದು ಬಾಲಾಜಿಯು ನಿರ್ಧರಿಸಿದ.

## 1. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

ಅ. ಬಾಲಾಜಿ ಏನು ಉರುಳುತ್ತಿರುವುದನ್ನು ನೋಡಿದ?

_____

ಆ. ಬಾಲಾಜಿ ಏನನ್ನು ನೆಟ್ಟ?

_____

ಇ. ಹತ್ತು ರೂಪಾಯಿ ನಾಣ್ಯಗಳನ್ನು ಯಾವುದು ನೀಡತೊಡಗಿತು?

_____

ಈ. ಬಾಲಾಜಿ ಗಿಡವನ್ನು ಏಕೆ ಅಲುಗಾಡಿಸಿದ?

_____

ಉ. 'ಅಮ್ಮ' ಎಂದು ಯಾರು ಕಿರುಚಿದರು?

_____

## 2. ಬಿಟ್ಟ ಸ್ಥಳಗಳ ತುಂಬಿರಿ

ಅ. ಬಾಲಾಜಿ _____ ರೂಪಾಯಿ ನಾಣ್ಯವನ್ನು ನೆಟ್ಟ.

ಆ. ಬಾಲಾಜಿ ತನಗೆ ಇಷ್ಟವಾದ ವಸ್ತುಗಳನ್ನು _____.

ಇ. ಹುಟ್ಟುಹಬ್ಬಕ್ಕೆ _____ ಖರೀದಿಸಲು ಬಯಸಿದ.

ಈ. ಹತ್ತು ರೂಪಾಯಿ ನಾಣ್ಯಗಳೆಲ್ಲ _____ ದಲ್ಲಿ ಖಾಲಿಯಾಗಿತ್ತು.

ಉ. ಬಾಲಾಜಿ _____ ಇಂದ ಎಚ್ಚರಗೊಂಡನು.

## 3. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ

ಅ. ದೊಡ್ಡದು × _____

ಆ. ಕನಸು × _____

ಇ. ಖರ್ಚು × _____

ಈ. ನಗು × _____

ಉ. ಹತ್ತಿರ × _____

## 4. ಸರಿ ತಪ್ಪು ಬರೆಯಿರಿ

ಅ. ಬಾಲಾಜಿ ಹತ್ತು ರೂಪಾಯಿ ನಾಣ್ಯ ಉರುಳುತ್ತಿರುವುದನ್ನು ನೋಡಿದನು. (  )

ಆ. ಅಂಗಡಿಯಲ್ಲಿ ಆನೆ, ಕುದುರೆ, ಒಂಟೆ, ನಾಯಿ, ಗೊಂಬೆಯನ್ನು ಖರೀದಿಸಿದನು. (  )

ಇ. ಬಾಲಾಜಿ ತನ್ನ ಹುಟ್ಟುಹಬ್ಬಕ್ಕೆ ಹೊಸ ಬಟ್ಟೆಗಳನ್ನು ಖರೀದಿಸಲು ಬಯಸಿದ. (  )

ಈ. ಬಾಲಾಜಿಯ ಸಹೋದರಿ ಅಮ್ಮ ಎಂದು ಕಿರುಚುತ್ತಾ ಎದ್ದಳು. (  )

ಉ. ತಾನು ಕಂಡದ್ದು ಕನಸು ಎಂದು ಬಾಲಾಜಿಯು ಅರಿತ. (  )

## ಅಭ್ಯಾಸ ಮಾಡೋಣ

### 1. ಓದುವುದನ್ನು ಮುಂದುವರೆಸಿ



ಪಾಠವನ್ನು ಆಲಿಸಿ ಅಥವಾ ಕೇಳಿಸಿಕೊಂಡು ಮುಂದುವರೆದು ಓದಬಹುದು.

### 2. ಕಥೆಯಲ್ಲಿ ನಿನಗೆ ಇಷ್ಟವಾದ ಪದಗಳನ್ನು ಬರೆ



1. _____
2. _____
3. _____
4. _____
5. _____
6. _____
7. _____
8. _____
9. _____
10. _____



ಗುಂಪಿನಲ್ಲಿರುವ ಪ್ರತಿಯೊಬ್ಬರೂ ಯಾರು ಹೆಚ್ಚು ಪದಗಳನ್ನು ಬರೆದಿದ್ದಾರೆ ಎಂಬುದನ್ನು ಹೋಲಿಸಬೇಕು.

ಅತಿ ಹೆಚ್ಚು ಪದಗಳನ್ನು ಬರೆದವರು: _____

ಒಂದೇ ರೀತಿಯ ಪದಗಳನ್ನು ಬರೆದವರ ಸಂಖ್ಯೆ: _____

### 3. ಮಾತನಾಡೋಣ

ವಿಶೇಷ ಚೇತನರಿಗೆ ಸಹಾಯ ಮಾಡಿದ ಚಟುವಟಿಕೆಗಳು






ವಿಶೇಷ ಚೇತನರಿಗೆ ಸಹಾಯ ಮಾಡಿದ ಚಟುವಟಿಕೆಗಳನ್ನು ಕುರಿತು ಮಾತನಾಡಬೇಕು.

## 4. ಓದಿ ಉತ್ತರ ಬರೆಯಿರಿ

### ಪದ ಫಲಕ

| | | |
|---|---|---|
| ನಾಣ್ಯ | ನಿದ್ರೆ | ಖರ್ಚು |
| ಅಂಗಡಿ | ಕಾರಣ | ಖಾಲಿ |
| ಹುಟ್ಟುಹಬ್ಬ | ಖರ್ಚು | ಗೊಬ್ಬರ |
| ಖಾಲಿ | ಚಿಗುರು | ಅಲುಗಾಡಿಸು |
| ಯಾಂತ್ರಿಕ | ಹಿತ್ತಲು | ಉಳಿತಾಯ |
| ಖರೀದಿ | ಉರುಳು | ಭವಿಷ್ಯ |
| ಸಹೋದರಿ | ಮಾತನಾಡು | ಹಣ |

1. ಎರಡು ಅಕ್ಷರಗಳನ್ನೊಳಗೊಂಡ ಪದಗಳು: _____ , _____

2. ಐದು ಅಕ್ಷರಗಳನ್ನೊಳಗೊಂಡ ಪದಗಳು: _____ , _____

3. 'ಹು' ಅಕ್ಷರದಿಂದ ಪ್ರಾರಂಭವಾಗುವ ಪದಗಳು: _____ , _____

4. ನಿನಗೆ ಇಷ್ಟವಾದ ಪದಗಳು: _____ , _____

ಎಲ್ಲಾ ಪದಗಳನ್ನೂ ವೇಗವಾಗಿ ಓದಿದೆನು.

## 5. ಉತ್ತರಿಸಿ

### ಹೊಸ ಬಟ್ಟೆ

ಶೀಲಾ ಜಾತ್ರೆಗೆ ಹೋದಳು
ಸೌಂದರ್ಯ ಅವಳ ಜೊತೆಗೆ ಹೋದಳು
ಜಾತ್ರೆಯಲ್ಲಿ ಶೀಲಾ ಹೊಸ ಬಟ್ಟೆ ಕೊಂಡಳು
ಐಶ್ವರ್ಯಗಳಿಗೆ ಹುಟ್ಟುಹಬ್ಬಕ್ಕೆ ನೀಡಿದಳು
ಇಬ್ಬರು ಸಂತೋಷ ಪಟ್ಟರು
ಆನಂದದಿಂದ ಕುಣಿದಾಡಿದರು



**ತುಂಬಿರಿ**

1. _____ ಹೊಸ ಬಟ್ಟೆಯನ್ನು ಕೊಂಡಳು.

2. _____ ಹುಟ್ಟುಹಬ್ಬಕ್ಕೆ ಉಡುಗೊರೆ ನೀಡಿದಳು.

## 6. ಉಕ್ತಲೇಖನ ಬರೆಯಿರಿ



ಪದಗಳನ್ನು ಕೇಳಿಸಿಕೊಂಡು ಉಕ್ತಲೇಖನ ಬರೆಯುವುದು.

## 7. ಚಿತ್ರಕ್ಕೆ ಸೂಕ್ತವಾದ ಘೋಷಣಾ ವಾಕ್ಯಗಳನ್ನು ಆರಿಸಿ ಬರೆಯಿರಿ



ಮೀನಿನ ತೊಟ್ಟಿ ಕೊಂಡುಕೊಂಡರೆ ಐದು ಬಣ್ಣದ ಮೀನುಗಳು ಉಚಿತ

ಪ್ರತಿಯೊಂದು ಗೊಂಬೆಗೂ ಶೇಕಡ ಹತ್ತು ರಿಯಾಯಿತಿ

ಒಂದು ಸೀರೆ ಕೊಂಡರೆ ಒಂದು ಉಚಿತ

ಎರಡು ಪುಸ್ತಕ ಕೊಂಡರೆ ಒಂದು ಲೇಖನಿ ಉಚಿತ











## 8. ಚಿತ್ರಕ್ಕೆ ಸರಿ ಹೊಂದುವ ವಾಕ್ಯಕ್ಕೆ (✓) ಗುರುತು ಹಾಕಿ





ಮರದ ಕೆಳಗೆ ಕೋತಿಗಳು ( )

ಮರದ ಪಕ್ಕದಲ್ಲಿ ಕೋತಿಗಳು ( )

ಮರದ ಮೇಲೆ ಕೋತಿಗಳು ( )

## 9. ಹೊಸ ಪದ ರಚಿಸಿ



| | | | | |
|---|---|---|---|---|
|  | + | ಪ್ರವೇಶ | = | |
| ಭರತ | + |  | = | |
|  | + | ಸಿಂಹ | = | |
|  | + | ಸವಾರ | = | |
| ಕೈ | + |  | = | |
|  | + | ಹಣ್ಣು | = | |

## 10. ಓದಿ

ಸುಂದರ ಉದ್ಯಾನವನ

ಬಣ್ಣದ ಹೂವುಗಳು

ದೊಡ್ಡ ಆಲದ ಮರ

ಹಸಿರು ಗಿಳಿಗಳ ಗುಂಪು

ಕೊಳದಲ್ಲಿ ಬಾತುಕೋಳಿಗಳು

ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ



## 11. ಚಿತ್ರ ನೋಡಿ ವಾಕ್ಯ ರಚಿಸಿ



## 12. ಸರಿಯಾದ ಚಟುವಟಿಕೆಗೆ (✓), ತಪ್ಪಾದ ಚಟುವಟಿಕೆಗೆ (✗) ಗುರುತು ಹಾಕಿ



## 13. ಹೇಳಿ ಅಭ್ಯಾಸ ಮಾಡಿ






ಅಂಗೈಯಲ್ಲಿ ಅರಮನೆ
ಸುಂದರವಾಗಿರುವ ನಮ್ಮ ಮನೆ

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ

ಮತ್ತೆ ಮತ್ತೆ ಉಚ್ಚರಿಸಿ ಅಭ್ಯಾಸ ಮಾಡಿ.

## ಕಲಿಕಾ ಪಯಣ

### ಸೃಜನಶೀಲ ಸಮಯ

✦ ಬೇಸಿಗೆ ರಜೆಯಲ್ಲಿ ಅಜ್ಜಿಯ ಮನೆಗೆ ಹೋದ ಅನುಭವದ ಬಗ್ಗೆ ಬರೆಯಿರಿ.



### ನಾನು ಕಲಿತದ್ದು



1. ಪದಗಳನ್ನು, ಚಿಕ್ಕ ಕಥೆಗಳನ್ನು ಓದಲು ಸಾಧ್ಯ. ☐ ☆☆☆
2. ಉಕ್ತಲೇಖನ ಬರೆಯಲು ಸಾಧ್ಯ. ☐ ☆☆☆
3. ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ☐ ☆☆☆

ಕಲಿತ ಕೌಶಲ್ಯಕ್ಕೆ ✓ಗುರುತು ಹಾಕಿ. ಪಡೆದ ಸಾಮರ್ಥ್ಯಗಳಿಗೆ ತಕ್ಕಂತೆ ಬಣ್ಣ ಹಚ್ಚಿ.



# ಮನರಂಜನಾ ಪುಟ



## ಚುಕ್ಕಿಗಳನ್ನು ಸೇರಿಸಿ ಬಣ್ಣ ಹಚ್ಚಿ

## ಮಾಡಿರಿ ಮತ್ತು ಆನಂದಿಸಿ











## ನಾನೆ ಓದುವೆ: ಬಣ್ಣ ಹಚ್ಚುವೆ









### ಕೃತಕ

ಕೃ

ಕೃ ತ ⟶ ಕೃತ

ಕೃತ ಕ ⟶ ಕೃತಕ



### ಹೃದಯ

ಹೃ

ಹೃ ದ ⟶ ಹೃದ

ಹೃದ ಯ ⟶ ಹೃದಯ



| | | | |
|---|---|---|---|
| ಗೃಹ | ನೃಪ | ಮೃಗ | ಬೃಹತ್ |
| ತೃಣ | ನೃತ್ಯ | ಹೃದಯ | ಕೃತಕ |
| ಧೃತ | ಪೃಥ್ವಿ | ದೃಶ್ಯ | ಗೃಹಿಣಿ |



ಗೃಹ

ಹೊಸಗೃಹ

ಸುಂದರ ಹೊಸಗೃಹ



ನೃತ್ಯ

ನೃತ್ಯ ಶಾಲೆ

ನೃತ್ಯ ಶಾಲೆಯಲ್ಲಿ ಸ್ಪರ್ಧೆ











## ನಾನೇ ಮಾಡುವೆ



### 1. ಕೇಳಿ, ಉತ್ತರ ಹೇಳಿ

ಅ. ಮನೆ ಕಟ್ಟಲು ಉಪಯೋಗಿಸುವ ವಸ್ತುಗಳು _____, _____, _____

ಆ. ಶಾಲೆಗೆ ಬರುವ ದಾರಿಯಲ್ಲಿ ಕಂಡ ವಸ್ತುಗಳು _____, _____, _____

ಇ. ನಿಮ್ಮ ಮನೆಯಲ್ಲಿ ಸಾಕಿರುವ ಪ್ರಾಣಿಗಳು _____, _____, _____

ಈ. ಜಾತ್ರೆಯಲ್ಲಿ ನೀನು ನೋಡಿದ ಅಂಗಡಿಗಳು _____, _____, _____

ಉ. ಕಾಡು ಪ್ರಾಣಿಗಳು _____, _____, _____

### 2. ಓದಿ



ನಾಣ್ಯಗಳು
ಮರಗಳು
ಬಟ್ಟೆಗಳು

ಅಂಗಡಿಗಳು
ಹುಟ್ಟುಹಬ್ಬ
ಉಡುಗೊರೆ

ಗಾಳಿಪಟ
ಪಕ್ಷಿ
ಎಚ್ಚರ

ಅಲುಗಾಡಿಸು
ಖರೀದಿ
ಏನಾಯಿತು

ವಸ್ತುಗಳು
ಗೊಬ್ಬರ
ಮಾಂತ್ರಿಕ

ಸಹೋದರಿ
ಕನಸು
ನನಸು

ಘಟಕ
2

# 3. ಶ್ರಮಕ್ಕೆ ತಕ್ಕ ಫಲ

ಬೆಟ್ಟದ ಮೇಲೆ ಹಸಿರಿನ ನಡುವೆ ಒಂದು ಸುಂದರವಾದ ಊರಿತ್ತು. ಅಲ್ಲಿ ಕತ್ತೆಯೊಂದು ವಸ್ತುಗಳನ್ನು ತರಲು ಬೆಟ್ಟದಿಂದ ಇಳಿದು ಪಟ್ಟಣಕ್ಕೆ ಹೋಗುತ್ತಿತ್ತು. ದಾರಿಯಲ್ಲಿ ಒಂದು ಕುದುರೆ ಎದುರಾಯಿತು.



ಕುದುರೆ: ಏಯ್ ಕತ್ತೆ, ಇಷ್ಟೊಂದು ಅವಸರದಿಂದ ಎಲ್ಲಿಗೆ ಹೋಗುತ್ತಿರುವೆ?

ಕತ್ತೆ: ಪಟ್ಟಣಕ್ಕೆ ಹೋಗಿ ತರಕಾರಿ, ದಿನಸಿ ಮತ್ತು ಬಟ್ಟೆಗಳನ್ನು ಕೊಂಡು ತರಲು ಹೋಗುತ್ತಿದ್ದೇನೆ.

ಕುದುರೆ: ನನ್ನಂತೆ ನಿನಗೆ ವೇಗವಾಗಿ ಓಡಲು ಸಾಧ್ಯವೇ?

ಕತ್ತೆ: ನಿನ್ನ ಜೊತೆ ಸ್ಪರ್ಧಿಸಲು ನನಗೆ ಸಮಯವಿಲ್ಲ, ನನ್ನನ್ನು ನಂಬಿ ಬೆಟ್ಟದ ಮೇಲೆ ಒಂದು ಊರೇ ಕಾದು ಕುಳಿತಿದೆ. (ಅವರಿಬ್ಬರ ಸಂಭಾಷಣೆಯ ನಡುವೆ ಕೋತಿಯೊಂದು ಮಧ್ಯ ಪ್ರವೇಶಿಸಿತು.)



ಕೋತಿ: ಏನು 'ಕತ್ತೆರಾಯರೇ' ನಿಮ್ಮನ್ನು ನೋಡಿ ತುಂಬಾ ದಿನಗಳಾಯಿತು? ಎಂದು ಕುದುರೆಯನ್ನು ಕೇಳಿತು.



ಕುದುರೆ: (ಬಹಳ ಕೋಪದಿಂದ) ಯಾರನ್ನು ನೋಡಿ ನೀನು ಕತ್ತೆರಾಯರೇ ಎಂದು ಹೇಳುತ್ತಿರುವೆ ನಾನು ಅತಿ ವೇಗವಾಗಿ ಓಡುವ ಕುದುರೆ ಎಂದು ಕೋತಿಗೆ ಹೇಳಿತು.

ಕೋತಿ: ನೋಡಲು ಇಬ್ಬರು ಒಂದೇ ರೀತಿ ಕಂಡರೂ "ಕತ್ತೆಯು ಪರರಿಗೆ ಸಹಾಯ ಮಾಡುವ ಒಳ್ಳೆಯ ಗುಣವನ್ನು ಹೊಂದಿದೆ" ಎಂದು ಕುದುರೆಗೆ ಹೇಳಿತು.



(ನಾನು ಕತ್ತೆಯು ನೋಡಲು ಒಂದೇ ರೀತಿ ಕಾಣುತ್ತೇವೆ. ಆದರೆ ಕತ್ತೆಗೆ ಇರುವ ಒಳ್ಳೆಯ ಗುಣಗಳು ಕೋತಿಯೂ ಅದನ್ನು ಹೊಗಳಲು ಕಾರಣ ಎಂದು ಅರಿತು ತನ್ನ ಅಹಂಕಾರಕ್ಕೆ ಕುದುರೆಯು ಪಶ್ಚಾತ್ತಾಪಪಟ್ಟಿತು.)

ಕೋತಿ: ಬನ್ನಿ ಗೆಳೆಯರೇ, ನನ್ನ ಬಳಿ ಹಣ್ಣುಗಳಿವೆ ನಾವೆಲ್ಲರೂ ಸೇರಿ ತಿನ್ನೋಣ ಎಂದು ಕರೆಯಿತು.

(ಕೋತಿ, ಕತ್ತೆ ಮತ್ತು ಕುದುರೆಯು ಸೇರಿ ಹಣ್ಣುಗಳನ್ನು ಸಂತೋಷದಿಂದ ಹಂಚಿಕೊಂಡು ತಿಂದವು.)



## 1. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

ಅ) ಸುಂದರವಾದ ಊರಿನಲ್ಲಿ ಇದ್ದ ಪ್ರಾಣಿ ಯಾವುದು?

ಆ) ಕತ್ತೆಯು ಎಲ್ಲಿಗೆ ಹೊರಟಿತ್ತು?

ಇ) ದಾರಿಯಲ್ಲಿ ಕತ್ತೆಗೆ ಯಾರು ಸಿಕ್ಕಿರು?

ಈ) ಕೋತಿ ಕುದುರೆಗೆ ಏನೆಂದು ಕರೆಯಿತು?

ಉ) ಕೋತಿ ಎಲ್ಲರಿಗೂ ಏನನ್ನು ನೀಡಿತು?

## 2. ಖಾಲಿ ಬಿಟ್ಟ ಸ್ಥಳ ತುಂಬಿ

ಅ) _____ ಮೇಲಿಂದ ಕಥೆ ಇಳಿದು ಬರುತ್ತಿತ್ತು.

ಆ) ನಿನಗೆ ನನ್ನಂತೆ _____ ಸಾಧ್ಯವೇ.

ಇ) ಕೋತಿಯು ಕುದುರೆಯನ್ನು _____ ಎಂದು ಕರೆಯಿತು.

ಈ) ಕುದುರೆಯು _____ ಯ ಮೇಲೆ ಕೋಪಗೊಂಡಿತು.

ಉ) ಈ ಕಥೆಯಲ್ಲಿ _____, _____ಮತ್ತು _____ ಪ್ರಾಣಿಗಳು ಕಂಡುಬರುತ್ತವೆ.

## 3. ಹೊಂದಿಸಿ ಬರೆಯಿರಿ

| | |
|---|---|
| ಅ) ಕತ್ತೆ | ಮರಗಳು |
| ಆ) ಕೋತಿ | ಕತ್ತೆಗಳು |
| ಇ) ಕುದುರೆ | ಗದ್ದೆಗಳು |
| ಈ) ಮರ | ಕೋತಿಗಳು |
| ಉ) ಬೆಟ್ಟ | ಕುದುರೆಗಳು |

## 4. ಸರಿ ತಪ್ಪು ಗುರುತು ಹಾಕಿ

ಅ) ಕತ್ತೆಯು ಬೆಟ್ಟದ ಮೇಲಿಂದ ಇಳಿದು ಬರುತ್ತಿತ್ತು. ( )

ಆ) ಕುದುರೆಯು ಕತ್ತೆಯನ್ನು ನೋಡಿ ಮಾತನಾಡಿಸಲಿಲ್ಲ. ( )

ಇ) ಕತ್ತೆ ಮತ್ತು ಕುದುರೆಯು ಜಗಳವಾಡಿದವು. ( )

ಈ) ಕತ್ತೆಯ ಒಳ್ಳೆಯ ಗುಣವನ್ನು ಕೋತಿಯು ಹೊಗಳಿತು. ( )

ಉ) ಕತ್ತೆ ಕುದುರೆ ಕೋತಿ ಮೂವರು ಒಟ್ಟಾಗಿ ಸೇರಿ ಹಣ್ಣುಗಳನ್ನು ತಿಂದವು. ( )

## ಚಟುವಟಿಕೆ

- ಪ್ರಾಣಿಗಳ ಚಿತ್ರಗಳನ್ನು ಅಂಟಿಸಿ.
- ದಿಕ್ಕುಗಳ ಹೆಸರುಗಳನ್ನು ಬರೆಯಿರಿ.

## ಅಭ್ಯಾಸ ಮಾಡೋಣ

### 1. ಓದುವುದನ್ನು ಮುಂದುವರೆಸಿ



ಪಾಠವನ್ನು ಆಲಿಸಿ ಅಥವಾ / ಕೇಳಿಸಿಕೊಂಡು ಮುಂದುವರೆದು ಓದಬಹುದು.



### 2. ಕಥೆಯಲ್ಲಿ ನಿನಗೆ ಇಷ್ಟವಾದ ಪದಗಳನ್ನು ಬರೆ

1. _____
2. _____
3. _____
4. _____
5. _____
6. _____
7. _____
8. _____
9. _____
10. _____



ಗುಂಪಿನಲ್ಲಿ ಯಾರು ಹೆಚ್ಚು ಪದಗಳನ್ನು ಬರೆದಿದ್ದಾರೆ ಎಂದು ಗುಂಪಿನವರೊಂದಿಗೆ ಹೇಳಿ.

ಹೆಚ್ಚು ಪದಗಳನ್ನು ಬರೆದಿರುವವರ ಸಂಖ್ಯೆ: _____

ಒಂದೇ ರೀತಿ ಬರೆದಿರುವ ಪದಗಳ ಸಂಖ್ಯೆ: _____

### 3. ಬರೆಯಿರಿ



ಕಥೆಯಲ್ಲಿ ನನಗೆ ಇಷ್ಟವಾದ ವಾಕ್ಯ:

_____

ನಿನ್ನ ಮನೆಯಲ್ಲಿರುವ ಸಾಕುಪ್ರಾಣಿಗಳ ಹೆಸರುಗಳನ್ನು ಬರೆ.

_____

ಹಾಲು ಯಾವ ಪ್ರಾಣಿಯಿಂದ ದೊರೆಯುತ್ತದೆ?

_____

## 4. ಮಾತನಾಡೋಣ






ಪ್ರವಾಸ ಹೋಗಿದ್ದಾಗ ತನಗಾದ ಅನುಭವಗಳನ್ನು ಕುರಿತು ಮಾತನಾಡಬೇಕು.

## 5. ಓದಿ ಉತ್ತರ ಬರೆ



### ಪದ ಫಲಕ

| | | |
|---|---|---|
| ಬೆಟ್ಟ | ಸಂಭಾಷಣೆ | ಸ್ಪರ್ಧಿಸಲು |
| ಕತ್ತೆ | ವೇಗವಾಗಿ | ಪಟ್ಟಣ |
| ಕುದುರೆ | ಕತ್ತೆರಾಯರೇ | ತರಕಾರಿ |
| ಸಂತೋಷ | ಕೋಪ | ಗುಣ |
| ದಿನಸಿ | ಅವಸರ | ಸುಂದರವಾದ |
| ಸಹಾಯ | ಹೊಗಳು | ಪಶ್ಚಾತಾಪ |
| ಅಹಂಕಾರ | ಹಣ್ಣುಗಳು | ಕುದುರೆ |
| ಕತ್ತೆ | ಮರಗಳು | ಕೋತಿ |

ಅ) ಎರಡು ಅಕ್ಷರಗಳನ್ನೊಳಗೊಂಡ ಪದಗಳು _____

ಆ) ನಾಲ್ಕು ಅಕ್ಷರಗಳನ್ನು ಒಳಗೊಂಡ ಪದಗಳು _____

ಇ) 'ಕ' ಅಕ್ಷರದಿಂದ ಪ್ರಾರಂಭವಾಗುವ ಪದ _____

ಈ) ನಿನಗೆ ಇಷ್ಟವಾದ ಪದ _____

ಎಲ್ಲಾ ಪದಗಳನ್ನು ವೇಗವಾಗಿ ಓದಿದೆ.

## ಚಟುವಟಿಕೆಗಳು



### ರೊಟ್ಟಿ ಅಂಗಡಿ ಕಿಟ್ಟಪ್ಪ

ರೊಟ್ಟಿ ಅಂಗಡಿ ಕಿಟ್ಟಪ್ಪ
ನನಗೊಂದು ರೊಟ್ಟಿ ತಟ್ಟಪ್ಪ
ದುಂಡನೆ ರೊಟ್ಟಿ
ಕೆಂಪಗೆ ಸುಟ್ಟು
ಐದು ರೂಪಾಯಿಗೆ ತಟ್ಟಪ್ಪ
ಬಿದ್ದು ಹೋಯಿತು ಕಿಟ್ಟಪ್ಪ
ರೊಟ್ಟಿ ಅಂಗಡಿ ಕಿಟ್ಟಪ್ಪ
ರೊಟ್ಟಿ ಮುಟ್ಟಿ ನೋಡಪ್ಪ
ಹಸಿ ಹಸಿ ಹಿಟ್ಟು
ರೊಟ್ಟಿಯ ಸುಟ್ಟು
ಬೇರೆ ರೊಟ್ಟಿಯ ತಟ್ಟಪ್ಪ
ನನಗಿದು ಬೇಡ ಕಿಟ್ಟಪ್ಪ
ರೊಟ್ಟಿ ಅಂಗಡಿ ಕಿಟ್ಟಪ್ಪ
ಬೇರೆ ರೊಟ್ಟಿಯ ತಟ್ಟಪ್ಪ
ದುಂಡನೆ ರೊಟ್ಟಿ
ಸುಡದೆ ಕೊಟ್ಟೆ.
ಠೂ ಠೂ ಸಂಗ ಬಿಟ್ಟಪ್ಪ
ಬಿಟ್ಟರೆ ಪುನಃ ಕಟ್ಟಪ್ಪ



ಈ ಪದ್ಯವನ್ನು ರಾಗವಾಗಿ ಹಾಡಿ ಅಭಿನಯಿಸಿ.

## 7. ಗಾದೆಗಳನ್ನು ಓದಿ



ಅ. ಮಾತು ಬೆಳ್ಳಿ ಮೌನ ಬಂಗಾರ

ಆ. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ

ಇ. ಹಾಸಿಗೆ ಇದ್ದಷ್ಟು ಕಾಲು ಚಾಚು

ಈ. ದೇಶ ಸುತ್ತು ಕೋಶ ಓದು

ಉ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ

### ಗಾದೆಗಳನ್ನು ಪೂರ್ಣಗೊಳಿಸಿ

ಅ. _____ ಮೌನ ಬಂಗಾರ

ಆ. ದೇಶ ಸುತ್ತು _____ ಓದು

ಇ. _____ ಕಾಲು ಚಾಚು

ಈ. ಗುಬ್ಬಿಯ ಮೇಲೆ _____

ಉ. ಮಿಂಚಿ ಹೋದ ಕಾರ್ಯಕ್ಕೆ _____ ಫಲವಿಲ್ಲ

## 8. ಉಕ್ತಲೇಖನ



## 9. ವಾಕ್ಯಕ್ಕೆ ಸರಿ ಹೊಂದುವ ಚಿತ್ರಕ್ಕೆ (✓) ಗುರುತು ಹಾಕಿ

ರೈತ ಹೊಲದಲ್ಲಿ ಉಳುಮೆ ಮಾಡುತ್ತಿದ್ದಾನೆ.



☐



☐



☐

## 10. ಚಿತ್ರ ನೋಡಿ ಮಾದರಿಯಂತೆ ಬರೆಯೋಣ





= ಇಲಿಯ ಬಿಲ







= _____

## 11. ಮಾದರಿಯಂತೆ ವಾಕ್ಯಗಳನ್ನು ರಚಿಸಿ ಮಕ್ಕಳಿಂದ ಹೇಳಿಸಿ



ಮಾದರಿ: ಕೋತಿ, ಮರ, ಬಾಲ

ಕೋತಿಯು ಒಂದು ಪ್ರಾಣಿ.

ಕೋತಿಯು ಮರವನ್ನು ಹತ್ತುತ್ತದೆ.

ಕೋತಿಗೆ ಬಾಲವಿದೆ.

ಅ) ಹಸು, ಕೊಟ್ಟಿಗೆ, ಹುಲ್ಲು

ಆ) ಅಳಿಲು, ಮರ, ಬಾಲ

## 12. ಈ ಕೆಳಗಿನ ಪದಗಳನ್ನು ಓದಿಸಿ

ಕುರಿ, ಚುರುಕು, ನುಗ್ಗೆ, ಗುರಿ, ರುಬ್ಬು, ಹುಬ್ಬು,
ಪುಸ್ತಕ, ಹುಲಿ, ಹುಡುಗಿ, ದಾರ, ಗೂಳಿ, ಪೂರ್ವ,
ಪಶ್ಚಿಮ, ಉತ್ತರ, ದಕ್ಷಿಣ, ತೂರು, ಸೂಜಿ.

## 13. ಇವುಗಳಲ್ಲಿ ಯಾವುದು ಹಾರುತ್ತದೆ ಎನ್ನುವುದನ್ನು ಗುರುತು ಮಾಡಿ ಬಣ್ಣ ಹಚ್ಚಿ





14. ನಿನ್ನ ಕುಟುಂಬದ ಸದಸ್ಯರ ಭಾವಚಿತ್ರಗಳನ್ನು ಅಂಟಿಸು

15. ಪದಗಳನ್ನು ರಚಿಸಿ



## 16. ಆರು ವ್ಯತ್ಯಾಸಗಳನ್ನು ಕಂಡುಹಿಡಿದು ಅದಕ್ಕೆ ವೃತ್ತ ಹಾಕಿ



## 17. ಚಿತ್ರಕ್ಕೆ ಸರಿಹೊಂದುವ ನೆರಳಿನ ಚಿತ್ರಕ್ಕೆ ಹೊಂದಿಸಿ



## 18. ಚಿತ್ರ ನೋಡಿ ಮಾತನಾಡಿ



## 19. ಸೇರಿಸಿ ಬರೆಯೋಣ




ಅ. _____ ಉ. _____

ಆ. _____ ಊ. _____

ಇ. _____ ಋ. _____

ಈ. _____ ಎ. _____



# ಮನರಂಜನಾ ಪುಟ



## ಸೂಕ್ತವಾದ ಬಣ್ಣ ಹಚ್ಚಿ





## ಚಿತ್ರಕ್ಕೆ ಸೂಕ್ತವಾದ ಪದಕ್ಕೆ ಗೆರೆ ಹಾಕಿ







ಹಿಂದೆ

ಕೆಳಗೆ

ನಡುವೆ



## ಉಚ್ಚರಿಸಿ ಅಭ್ಯಾಸ ಮಾಡಿ




ಕೆಂಪು ಕುಂಕುಮ ಕಪ್ಪು ಕುಂಕುಮ
ರೈಲು ಲಾರಿ

ಕೆಸ್ತೂರು ರಸ್ತೆಯಲ್ಲಿ ಕಸ್ತೂರು ರಂಗ ರಾಯರು
ಕಾಗೆ ಪುಕ್ಕ ಗುಬ್ಬಿ ಪುಕ್ಕ

## ಕಲಿಕಾ ಪಯಣ



✦ ಸಾಕು ಪ್ರಾಣಿಗಳ ಬಗ್ಗೆ ತಿಳಿಯುತ್ತಾರೆ.

## ನಾನು ಕಲಿತದ್ದು



1. ಪದ್ಯವನ್ನು ಕಂಠಪಾಠ ಮಾಡಲು ಸಾಧ್ಯ. ☐ ☆☆☆
2. ಗಾದೆಗಳನ್ನು ಹೇಳಲು ಸಾಧ್ಯ. ☐ ☆☆☆
3. ಸಂಭಾಷಣೆಯ ಬಗ್ಗೆ ಮಾತನಾಡಲು ಸಾಧ್ಯ. ☐ ☆☆☆

ಕಲಿತ ಕೌಶಲ್ಯಕ್ಕೆ ✓ ಗುರುತು ಹಾಕಿ. ಪಡೆದ ಸಾಮರ್ಥ್ಯಗಳಿಗೆ ತಕ್ಕಂತೆ ಬಣ್ಣ ಹಚ್ಚಿ.

# 4. ಒಗ್ಗಟ್ಟಿನಲ್ಲಿ ಬಲವಿದೆ



ಬಿಂದು ಮತ್ತು ಅರುಣ್ ತಮ್ಮ ತೋಟದ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರಬೇಕಾದರೆ ದೂರದಲ್ಲಿ ನಾಯಿ ಬೊಗಳುವ ಶಬ್ದ ಕೇಳಿಸಿತು. ಇಬ್ಬರೂ ಶಬ್ದ ಬಂದ ದಿಕ್ಕಿನತ್ತ ಹೊರಟರು.



ಅಲ್ಲಿ ಹೋಗಿ ನೋಡಿದಾಗ ನಾಯಿಯೊಂದು ಹಳ್ಳದೊಳಗೆ ಬಿದ್ದಿರುವ ದೃಶ್ಯ ಕಂಡಿತು.

ಅಕ್ಕ ಹಳ್ಳದಲ್ಲಿ ನಾಯಿ ಬಿದ್ದುಬಿಟ್ಟಿದೆ ಅದನ್ನು ನಮ್ಮಿಂದ ಕಾಪಾಡಲು ಸಾಧ್ಯವಿಲ್ಲ ಎಂದನು ಅರುಣ್.



ಹಾಗೆ ಹೇಳಬಾರದು ಅರುಣ್, ಇದೇ ರೀತಿ ಬೇರೆ ಪ್ರಾಣಿಗಳು ಈ ಹಳ್ಳದಲ್ಲಿ ಬಿದ್ದರೆ ಏನು ಮಾಡುವುದು ಅವುಗಳನ್ನು ಕಾಪಾಡಲು ಏನಾದರೂ ಮಾಡಬೇಕು ಎಂದಳು ಬಿಂದು.



ಅವಳಿಗೆ ಒಂದು ಉಪಾಯ ಹೊಳೆಯಿತು. ನಾವಿಬ್ಬರೂ ಸೇರಿ ಮಣ್ಣನ್ನು ಹಾಕಿ ಹಳ್ಳವನ್ನು ಮುಚ್ಚೋಣ ಆಗ ಹಳ್ಳದೊಳಗೆ ಯಾವ ಪ್ರಾಣಿಗಳು ಬೀಳುವುದಿಲ್ಲ ಹಾಗೂ ಕೆಳಗೆ ಬಿದ್ದಿರುವ ನಾಯಿಯನ್ನು ಕೂಡ ಮೇಲೆತ್ತಬಹುದು ಎಂದಳು.

ಪ್ರಾರಂಭದಲ್ಲಿ ತಮ್ಮನಿಗೆ ಅದು ಇಷ್ಟವಾಗಲಿಲ್ಲ ಆದರೆ ಬಿಂದು ಅವನು ಒಪ್ಪಿಕೊಳ್ಳುವಂತೆ ವಿವರಿಸಿ ಹೇಳಿದಳು. ನಂತರ ಅವರಿಬ್ಬರು ಸೇರಿ ಮಣ್ಣನ್ನು ಹಳ್ಳಕ್ಕೆ ಸುರಿಯುತ್ತಾ ಬಂದರು. ಮಣ್ಣನ್ನು ಒಂದೇ ಬದಿಗೆ ಸುರಿದ ಪರಿಣಾಮ ನಾಯಿ ಮೇಲೆ ಬರಲು ಪ್ರಯತ್ನಿಸತೊಡಗಿತು.



ಹೀಗೆ ಅಣ್ಣ ತಂಗಿ ಇಬ್ಬರೂ ನಿರಂತರವಾಗಿ ಮಣ್ಣನ್ನು ಹಳ್ಳಕ್ಕೆ ಸುರಿದಿದ್ದರಿಂದ ನಾಯಿಯು ಮಣ್ಣಿನ ಮೇಲೆ ಹತ್ತಿ ಹೊರಗೆ ಬಂದು ಅವರಿಬ್ಬರನ್ನು ಕಂಡು ಪ್ರೀತಿಯಿಂದ ಬಾಲವನ್ನು ಅಲ್ಲಾಡಿಸುತ್ತಾ ತನ್ನ ಸಂತೋಷವನ್ನು ವ್ಯಕ್ತಪಡಿಸಿತು. ಇದರಿಂದ ಅಕ್ಕ ತಮ್ಮ ಇಬ್ಬರೂ ಆನಂದಿಸಿದರು.

## 1. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ

ಅ. ಯಾವ ಪ್ರಾಣಿಯ ಶಬ್ದ ಕೇಳಿಸಿತು?

_____

ಆ. ನಾಯಿ ಎಲ್ಲಿ ಇದ್ದಿತ್ತು?

_____

ಇ. ಅದನ್ನು ಯಾರು ನೋಡಿದರು?

_____

ಈ. ಅಕ್ಕ ತಮ್ಮ ಏನು ಉಪಾಯ ಮಾಡಿದರು?

_____

ಉ. ನಾಯಿಯನ್ನು ಕಾಪಾಡಲು ಸಾಧ್ಯವಾಯಿತೆ?

_____

## 2. ಸರಿ ತಪ್ಪು ಬರೆಯಿರಿ

ಅ. ಕೋಳಿ ಕೂಗುವ ಶಬ್ದ ಬಿಂದು ಮತ್ತು ಅರುಣ್‌ಗೆ ಕೇಳಿಸಿತು.

ಆ. ಹಳ್ಳದಲ್ಲಿ ನಾಯಿ ಬಿದ್ದಿರುವುದನ್ನು ಅವರಿಬ್ಬರೂ ನೋಡಿದರು.

ಇ. ಬಿಂದು ನಾಯಿಯನ್ನು ಕಾಪಾಡಬೇಕೆಂದು ತಮ್ಮನಿಗೆ ಹೇಳಿದಳು.

ಈ. ಇಬ್ಬರು ಸೇರಿ ಹಳ್ಳಕ್ಕೆ ಮಣ್ಣನ್ನು ಸುರಿಯಲಿಲ್ಲ.

ಉ. ಅವರು ನಾಯಿಯನ್ನು ಕಾಪಾಡಲಿಲ್ಲ.

## 3. ಖಾಲಿ ಬಿಟ್ಟ ಸ್ಥಳ ತುಂಬಿರಿ

ಅ. ಬಿಂದು ಮತ್ತು _____ ತೋಟಕ್ಕೆ ಹೋಗುತ್ತಿದ್ದರು.

ಆ. ಹಳ್ಳದಲ್ಲಿ _____ ಬಿದ್ದಿರುವುದನ್ನು ನೋಡಿದರು.

ಇ. ಬಿಂದು ತಮ್ಮನಿಗೆ ನಾಯಿಯನ್ನು _____ ಬೇಕೆಂದು ಹೇಳಿದಳು.

ಈ. ಬಿಂದು ನಾಯಿಯನ್ನು ಕಾಪಾಡಲು ಒಂದು _____ ಮಾಡಿದಳು.

ಉ. ಅವರಿಬ್ಬರೂ ಸೇರಿ _____ ಕಾಪಾಡಿದರು.

## 4. ಹೊಂದಿಸಿ ಬರೆಯಿರಿ



## ಅಭ್ಯಾಸ ಮಾಡೋಣ

### 1. ಓದುವುದನ್ನು ಮುಂದುವರೆಸಿ



ಪಾಠವನ್ನು ಆಲಿಸಿ ಅಥವಾ / ಕೇಳಿಸಿಕೊಂಡು ಮುಂದುವರೆದು ಓದಬಹುದು

### 2. ಕಥೆಯಲ್ಲಿ ಬರುವ ಪದಗಳನ್ನು ಬರೆಯಿರಿ



1. _____
2. _____
3. _____
4. _____
5. _____
6. _____
7. _____
8. _____
9. _____
10. _____



ಗುಂಪಿನಲ್ಲಿ ಯಾರು ಹೆಚ್ಚು ಪದಗಳನ್ನು ಬರೆದಿದ್ದಾರೆ ಎಂದು ಗುಂಪಿನವರೊಂದಿಗೆ ಹೇಳಿ.

ಹೆಚ್ಚು ಪದಗಳನ್ನು ಬರೆದಿರುವವರ ಸಂಖ್ಯೆ: _____

ಒಂದೇ ರೀತಿ ಬರೆದಿರುವ ಪದಗಳ ಸಂಖ್ಯೆ: _____

### 3. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ



(ಹಳ್ಳದೊಳಗೆ, ನಾಯಿ, ಬಿಂದು ಮತ್ತು ಅರುಣ್)

ಅ. _____ ಬೊಗಳುವ ಶಬ್ದ ಅರುಣ್ ಮತ್ತು ಬಿಂದುವಿಗೆ ಕೇಳಿಸಿತು.

ಆ. _____ ಮತ್ತು _____ಸೇರಿ ಹಳ್ಳಕ್ಕೆ ಮಣ್ಣನ್ನು ಸುರಿದರು.

ಇ. ನಾಯಿಯು _____ ಬಿದ್ದಿರುವ ದೃಶ್ಯ ಕಂಡಿತು.

## 4. ಮಾತನಾಡೋಣ






ಮನೆಯ ಸುತ್ತ ಮುತ್ತಲಿನ ಪರಿಸರದ ಬಗೆಗೆ ಮಾತನಾಡಬೇಕು.

## 5. ಉತ್ತರಿಸಿ



### ಪದ ಫಲಕ

| | | | |
|---|---|---|---|
| ಬಿಂದು | ನಾಯಿ | ಮಣ್ಣು | ದೃಶ್ಯ |
| ಅರುಣ್ | ಆಳವಾದ | ಸುರಿದರು | ಉಪಾಯ |
| ತೋಟ | ಹಳ್ಳ | ಶಬ್ದ | ಕಾಪಾಡಲು |
| ಪ್ರಾಣಿಗಳು | ಮುಚ್ಚೋಣ | ಕಾಪಾಡು | ಬಿದ್ದುಬಿಟ್ಟಿದೆ |
| ದೂರದಲ್ಲಿ | ಪರಿಣಾಮ | ನಿರಂತರ | ಪ್ರಾರಂಭ |
| ವಿವರಿಸಿ | ಸಂತೋಷ | ವ್ಯಕ್ತಪಡಿಸು | ಪ್ರೀತಿ |

1. ನಾಲ್ಕು ಅಕ್ಷರದ ಪದಗಳು : _____, _____, _____

2. ಮೂರು ಅಕ್ಷರದ ಪದಗಳು : _____, _____, _____, _____

3. ನನಗೆ ಇಷ್ಟವಾದ ಪದಗಳು : _____, _____, _____, _____,

4. ನನಗೆ ಇಷ್ಟವಾದ ಪಾತ್ರದ ಹೆಸರು : _____, _____, _____

ಎಲ್ಲಾ ಪದಗಳನ್ನು ವೇಗವಾಗಿ ಓದಿದೆನು.

## 6. ಹಾಡನ್ನು ಹಾಡಿರಿ





### ಬೆರಳು

ಕೈಗಳ ಅಂದ ಬೆರಳಿನ ಚಂದ
ಸವಿ ಮಕರಂದ

ಅಕ್ಷರ ಸ್ವರ ಕೈಗಳ ಜೋಡಿಸಿ
ನಮಿಸಿ ಒಲವಿಂದ

ನೇಗಿಲು ಹೇಳಿದ ರೈತನ ಕೈಗಳು
ಹಸಿವನ್ನು ಹಿಂಗಿಸಿವೆ

ಶಸ್ತ್ರವ ಹಿಡಿದ ಯೋಧನ ಕೈಗಳು
ದೇಶವ ರಕ್ಷಿಸಿವೆ

ಹೃದಯವ ಬೆಳಗಿದ ಕೈ ಬೆರಳ ಸೇವೆಗೆ
ನಮಿಸುವೆ ತಲೆಬಾಗಿ








## 7. ಹೇಳಿದ್ದನ್ನು ಕೇಳಿ ಬರೆಯಿರಿ



ಪದಫಲಕದಲ್ಲಿರುವ ಪದಗಳನ್ನು ಬರೆಯಬೇಕು.

8. ಚಿತ್ರಗಳನ್ನು ನೋಡಿ ಕೆಳಗಿನ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿ

1




2




3




4




9. ಕೆಳಗಿನ ಚಿತ್ರಗಳನ್ನು ಗುರುತಿಸಿ ಅವುಗಳ ಹೆಸರುಗಳನ್ನು ಕೆಳಗೆ ನೀಡಿರುವ ಖಾಲಿ ಸ್ಥಳಗಳಲ್ಲಿ ಬರೆಯಿರಿ

















## 10. ಚಿತ್ರ ನೋಡಿ ಮಾತನಾಡೋಣ ಬರೆಯೋಣ

ಚಿತ್ರ ನೋಡಿ ಮಾತನಾಡಬೇಕು ಹಾಗೂ ಪ್ರಾಣಿಗಳ ಹೆಸರುಗಳನ್ನು ಬರೆಯಬೇಕು.

## 11. ಚಿತ್ರಕ್ಕೆ ಸರಿಹೊಂದುವ ವಾಕ್ಯ ಯಾವುದು?



- ಸಿಂಹವು ಕುಳಿತಿದೆ. ☐
- ಹುಲಿಯು ನೆಲದ ಮೇಲೆ ಮಲಗಿದೆ. ☐
- ನರಿಯು ಓಡುತ್ತಿದೆ. ☐

ಸೂಕ್ತವಾದ ಸ್ಥಳಕ್ಕೆ ಗೆರೆ ಎಳೆದು ಹೊಂದಿಸಿ









## 12. ಸರಿ ಹೊಂದದ ಪದಕ್ಕೆ ವೃತ್ತ ಹಾಕಿ ಬರೆಯಿರಿ

| | | | | | |
|---|---|---|---|---|---|
| ಹಸು | ನಾಯಿ | ಎಮ್ಮೆ | ಕುರಿ | ನರಿ | _____ |
| ಕತ್ತೆ | ಗಿಳಿ | ಪಾರಿವಾಳ | ಕಾಗೆ | ಗುಬ್ಬಚ್ಚಿ | _____ |
| ಪುಸ್ತಕ | ಲೇಖನಿ | ಬಾಗಿಲು | ಸೀಸದ ಕಡ್ಡಿ | ಚೀಲ | _____ |
| ಆನೆ | ಹುಲಿ | ಬೆಕ್ಕು | ಸಿಂಹ | ಜಿರಾಫೆ | _____ |

## 13. ಹೇಳಿ ಅಭ್ಯಾಸ ಮಾಡಿ




ಚಿಕ್ಕ ಚಕ್ಕುಲಿ ಚಕ್ಕುಲಿಗಿಂತ ಚಿಕ್ಕದು
ಹಸು ಹಸುವಿಗೆ ಹಸಿರು ಹುಲ್ಲು ತಿನ್ನಿಸು

ಕಪ್ಪೆ ಕಪ್ಪು ಕಪ್ಪಾದ ಕಪ್ಪೆ ಕಪ್ಪು ಕಪ್ಪು
ಅಕ್ಕ ಅಕ್ಕಿಯನ್ನು ಅಕ್ಕರೆಯಿಂದ ಅಳೆದು
ಅಡಿಗೆಯಲ್ಲಿಟ್ಟಳು.

## ಕಲಿಕಾ ಪಯಣ

### ರಚನಾ ವಿನ್ಯಾಸದ ಸಮಯ

ನಾಯಿಯ ಮುಖವಾಡವನ್ನು ರಚಿಸಿ,
ನಾಯಿಯಂತೆ ನಟಿಸುವುದು.





## ನಾನು ಕಲಿತದ್ದು





| | | |
|---|---|---|
| 1. ತನಗೆ ತಿಳಿದಿರುವ ಕಥೆಯನ್ನು ಹೇಳಲು ಸಾಧ್ಯ. | ☐ | ☆☆☆ |
| 2. ಕಥೆಯಲ್ಲಿನ ಸನ್ನಿವೇಶಗಳನ್ನು ವಿವರಿಸಲು ಸಾಧ್ಯ. | ☐ | ☆☆☆ |
| 3. ಕಥೆಯಲ್ಲಿ ಬರುವ ಪದಗಳನ್ನು ಆಲಿಸಿ ಬರೆಯಲು ಸಾಧ್ಯ. | ☐ | ☆☆☆ |

ಕಲಿತ ಕೌಶಲ್ಯಕ್ಕೆ ✓ ಗುರುತು ಹಾಕಿ. ಪಡೆದ ಸಾಮರ್ಥ್ಯಗಳಿಗೆ ತಕ್ಕಂತೆ ಬಣ್ಣ ಹಚ್ಚಿ.

## ನಾನೇ ಓದುವೆ : ಬಣ್ಣ ಹಚ್ಚುವೆ







### ಹೆಸರು

ಹ

ಹೆ ಸ ⟶ ಹೆಸ

ಹೆಸ ರು ⟶ ಹೆಸರು



### ನೆರಳು

ನ

ನೆ ರ ⟶ ನೆರ

ನೆರ ಳು ⟶ ನೆರಳು



| | | | | |
|---|---|---|---|---|
| ಗೆರೆ | ಗೆಣಸು | ಸೆಣಬು | ಸೆಳೆ | ಬೆಳೆ |
| ತೆನೆ | ತೆನೆ | ಮೆಣಸು | ನೆನಪು | ಬೆಲ್ಲ |
| ತೆಂಕಣ | ಮೆರವಣಿಗೆ | ನೆತ್ತರು | ಹೆಸರು | ಕೆಸರು |



ಗೆಣಸು

ಸಿಹಿ ಗೆಣಸು

ರುಚಿಯಾದ ಸಿಹಿ ಗೆಣಸು



ಪೆಟ್ಟಿಗೆ

ಚಿನ್ನದ ಪೆಟ್ಟಿಗೆ

ಅಂದವಾದ ಚಿನ್ನದ ಪೆಟ್ಟಿಗೆ

ರತ್ನಖಚಿತ ಅಂದವಾದ ಚಿನ್ನದ ಪೆಟ್ಟಿಗೆ



## ನಾನೇ ಓದುವೆ; ಬಣ್ಣ ಹಚ್ಚುವೆ





ಳೇ ನೇ ಧೇ ಘೇ ಯೇ ಜೇ ಟೇ ಸೇ ಹೇ ಬೇ
ಗೇ ತೇ ಞೇ ರೇ ದೇ ಖೇ ಚೇ
ಥೇ ಜೇ ಲೇ ಝೇ ಕೇ ಠೇ ಶೇ ಢೇ
ಪೇ
ಮೇ ಣೇ ಡೇ ಭೇ ವೇ ಘೇ ಷೇ ಜೇ

ಕೇ ದೇ
ಖೇ ಧೇ
ಗೇ ನೇ
ಘೇ ಪೇ
ಜೇ ಫೇ
ಚೇ ಬೇ
ಜೇ ಭೇ
ಜೇ ಮೇ
ಝೇ ಯೇ
ಞೇ ರೇ
ಟೇ ಲೇ
ಠೇ ವೇ
ಡೇ ಶೇ
ಢೇ ಷೇ
ಣೇ ಸೇ
ತೇ ಹೇ
ಥೇ ಳೇ



### ಲೇಪನ

ಲೇ

ಲೇ ಪ → ಲೇಪ

ಲೇಪ ನ → ಲೇಪನ

### ನೇತಾರ

ನೇ

ನೇ ತಾ → ನೇತಾ

ನೇತಾ ರ → ನೇತಾರ



| | | | | |
|---|---|---|---|---|
| ಕೇಸರ | ನೇಸರ | ನೇತಾರ | ವೇಳೆ | ಸೇವೆ |
| ವೇದನೆ | ಬೇಸರ | ಲೇಪನ | ಲೇಖನ | ಜೇನು |
| ಮೇಣ | ಶೇಷ | ಸೇವೆ | ಹೇಳು | ತೇಲು |



ಕೇಸರ

ಸಿಂಹದ ಕೇಸರ

ಉದ್ದವಾಗಿರುವ ಸಿಂಹದ ಕೇಸರ



ಬೇಳೆ

ತೊಗರಿ ಬೇಳೆ

ದಪ್ಪನೆಯ ತೊಗರಿ ಬೇಳೆ











# ಎರಡನೇ ಅವಧಿ ಕಲಿಕಾ ಪಯಣದಲ್ಲಿ



## Standard 2 - Kannada Reader -Term-II

## Textbook Development Team


### Coordinator

**Dr. T. Jayagandhi**
Senior Lecturer,
SCERT, Chennai-6.

### Subject Expert

**Dr.MUNIRAJA .A**
Assistant Professor
Department of Languages -Kannada
Madras Christian College, Tambaram,
Chennai - 600059

### List of Authors

**K.N. Adishesha** SGT
P.U.P School Sothanapuram.
Thalavadi,Erode Dist.

**C. Kumara,** SGT
P.U.M, School, Arulavady,
Thalavadi Block
Erode Dist.

**C. Mahadeva,** SGT
P.U.P, School, Hiripuram,
Thalavadi Block
Erode Dist.

### Art and Design Team

**M. Amalraj,**
Layout Co-ordinator
B.T. Asst., SCERT, Chennai.

**P. Prasanth,** Designer

**Poornachandran T.K.** Designer

### Illustration

**Velmurugan**

### Wrapper Design

**Kathir Arumugam**



This book has been printed on 80 G.S.M.
Elegant Maplitho paper.

Printed by offset at: